ವಿದ್ಯುತ್ ದರ ಏರಿಕೆಯ ಬಗ್ಗೆ ಪ್ರತಿಭಟನೆ

**(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರನ್ನು ಹೊರತುಪಡಿಸಿ ವಿರೋಧ ಪಕ್ಷದ ಎಲ್ಲಾ ಸದಸ್ಯರು ಸದನದ ಬಾವಿಯಲ್ಲಿ ಬಂದು ಧರಣಿ ಕುಳಿತಿದ್ದರು)**

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ):** ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ದರ ಏರಿಕೆಯ ಬಗ್ಗೆ ಈ ಸದನದಲ್ಲಿ ತೀವ್ರವಾದಂಥ ಚರ್ಚೆಯನ್ನು, ಈ ಸದನದಲ್ಲಿ ತೀವ್ರವಾದಂಥ ಪ್ರತಿಭಟನೆ, ಒತ್ತಡ ಎಲ್ಲವನ್ನೂ ತಂದಿದ್ದರೂ, ಸಹ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಎಲ್ಲಾ ಪ್ರತಿಭಟನೆಯನ್ನೂ ಬದಿಗೊತ್ತಿ, ನಾನು ಮಾಡಿದ್ದೇ ಸರಿ ಎನ್ನತಕ್ಕಂಥ ನಿರ್ಧಾರವನ್ನು ಕೈಗೊಂಡಿದ್ದಾರೆ. ನನಗೆ ಪಾಪ ಅವರ ಬಗ್ಗೆ ಒಂದು ರೀತಿಯ ಕರುಣೆ ಮತ್ತು ಅನುಕಂಪ ಎರಡೂ ಇದೆ. ಆದರೂ ಅವರು ಯಾವ ಉದ್ದೇಶಕ್ಕೋಸ್ಕರವಾಗಿ ಈ ತರಹ ಮಾಡಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಈ ಕೂಡಲೇ ಸರ್ಕಾರ ವಿದ್ಯುಚ್ಛಕ್ತಿಯ ದರವನ್ನು ಇಳಿಸಬೇಕೆಂದು ಹೇಳುತ್ತಾ ನಾವು ಸಭಾತ್ಯಾಗ ಮಾಡುತ್ತಿದ್ದೇವೆ ಸ್ವಾಮಿ. ಏಕೆಂದರೆ ಇದು ತೀವ್ರವಾದಂಥ ವಿಚಾರ. . . .

**ಅಧ್ಯಕ್ಷರು:** ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು, ಹಿರಿಯ ಮುಖಂಡರುಗಳೆಲ್ಲಾ ಇದ್ದೀರಿ. ಈಗ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳವುದೇನೆಂದರೆ ನಮ್ಮ ಮೊದಲನೆಯ ಕಾರ್ಯಕ್ರಮ ಉಪಾಧ್ಯಕ್ಷರ ಚುನಾವಣೆ ಇದೆ. ಮೊನ್ನೆಯೂ ಸಹ ನಾನು ತಮ್ಮೆಲ್ಲರನ್ನೂ ವಿನಂತಿ ಮಾಡಿಕೊಂಡಿದ್ದೇನೆ. ಇದುಸರ್ಕಾರದ ನಡವಳಿಕೆಗೆ ಸಂಬಂಧಿಸಿದ ವಿಷಯವಲ್ಲ; ಇದು ನಮ್ಮ ಸದನದ ಕಾರ್ಯಕಲಾಪಗಳಿಗೆ ಸೀಮಿತವಾಗಿರತಕ್ಕಂಥ ವಿಷಯ, ಈ ವಿಚಾರದಲ್ಲಿ ತಮ್ಮೆಲ್ಲರಿಗೂ ಜವಾಬ್ದಾರಿ ಇದೆ. ದಯಮಾಡಿ ಈ ವಿಚಾರಕ್ಕೆ ನನ್ನ ಜೊತೆ ಸಹಕರಿಸಿ, ಉಳಿದ ಹಾಗೆ ತಮ್ಮ ನಿಲುವು ಏನಿದೆ ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ತಾವು ಏನು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಅಪೇಕ್ಷಪಡುತ್ತೀರಿ ಅದಕ್ಕೆ ತಾವು ಸರ್ವಸ್ವತಂತ್ರರಿದ್ದೀರಿ; ಅದು ನಿಮ್ಮ ಹಕ್ಕು ಕೂಡ. ಅನುಭವಸ್ಥರಿದ್ದೀರಿ, ಹಿರಿಯ ರಾಜಕಾರಣಿಗಳಿದ್ದೀರಿ, ಬಹಳ ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿದ್ದೀರಿ, ದಯಮಾಡಿ ತಮ್ಮೆಲ್ಲರಲ್ಲೂ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈ ಸದನದ ಒಂದು ಪರಂಪರೆಯನ್ನು ನಾವು ರಕ್ಷಿಸಿಕೊಂಡು ಹೋಗುವ ದೃಷ್ಟಿಯಿಂದ ದಯಮಾಡಿ ತಾವೆಲ್ಲರೂ ಸಹಕರಿಸಿ ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕು. ಈ ಮೊದಲನೆ ಕಾರ್ಯಕ್ರಮವನ್ನು ಮಾಡಿಬಿಡೋಣವೆಂದು ನಾನು ತಮ್ಮಲ್ಲಿ ಕೈ ಜೋಡಿಸಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**(ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದ ಎಲ್ಲಾ ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)**

**ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):-** ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು, ನಿನ್ನೆಯೂ ಸಹ ತಾವು ವಿನಂತಿ ಮಾಡಿದ್ದೀರಿ. ನಿನ್ನೆ ಸನ್ಮಾನ್ಯ ಉಪಾಧ್ಯಕ್ಷರ ಚುನಾವಣೆಯನ್ನು, ನಮ್ಮಲ್ಲಿ ಹಾಕಿಕೊಂಡು ಬಂದಿರುವಂಥ ಸತ್ಸಂಪ್ರದಾಯದಂತೆ ಅದಕ್ಕೆ ನಾವು ಅವಕಾಶ ಮಾಡಿಕೊಡಬೇಕಾಗಿತ್ತು, ಆದರೆ ಅನಿವಾರ್ಯವಾಗಿ ರಾಜ್ಯದ ಜನರ ಹಿತದೃಷ್ಟಿಯಿಂದ ವಿದ್ಯುತ್ ದರವನ್ನು ಇಳಿಸಬೇಕೆಂದು ಧರಣಿ ಕುಳಿತಾಗ ಮಧ್ಯದಲ್ಲಿ ಈ ಕಾರ್ಯಕ್ರಮವನ್ನು ನಡೆಸಿದರೆ